**ದರಖಾಸ್ತ ನಂ. 31/2023**

**ಪಿಡಬ್ಲು - 1 ಶಾಂತಾ ನಂದಿಕೋಲ**

**ಸಾಕ್ಷಿಯನ್ನು ದಿನಾಂಕಃ 16-12-2025 ರಂದು ಕರೆಯಿಸಿ, ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಡಿ.ಎಚ್. ಆರ್ ರವರ ಪರ ಶ್ರೀ ಪಿ.ಕೆ.ಯು. ವಕೀಲರಿಂದಃ**

1. ನಾನು ಬೆಳವಣಿಕಿ ಗ್ರಾಮದಲ್ಲಿ ವಾಸವಾಗಿರುತ್ತೇನೆ. ಈ ಪ್ರಕರಣವನ್ನು ಯಾರು ಯಾರ ವಿರುದ್ದ, ಏಕೆ ಸಲ್ಲಿಸಿರುತ್ತಾರೆ ಎಂದು ಗೊತ್ತಾ ಎಂದರೆ ಸಾಕ್ಷಿಯು ಹೊಲವನ್ನು ಯಾರು ತೆಗೆದುಕೊಂಡಿರುತ್ತಾರೋ ಅವರ ಮೇಲೆ ನಾನು ಹಾಕಿರುತ್ತೇನೆ. ಆ ಹೊಲದ ಸರ್ವೇ ನಂಬರ 361/3 ಇರುತ್ತದೆ. ಅದು 1 ಎಕರೆ 33 ಗುಂಟೆ ಇರುತ್ತದೆ. ಸದರ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆಃ ನನ್ನ 2 ನೇ ಅಜ್ಜನ ಜಮೀನು ಇರುತ್ತದೆ. ಪಶ್ಚಿಮಕ್ಕೆಃ ನನ್ನ 2 ನೇ ಅಜ್ಜನ ಜಮೀನು ಇರುತ್ತದೆ. ಉತ್ತರಕ್ಕೆಃ ಶಂಕ್ರಯ್ಯನ ಜಮೀನು ಇರುತ್ತದೆ. ದಕ್ಷಿಣಕ್ಕೆಃ ದಾರಿ ಇರುತ್ತದೆ. ಸದರಿ ಚಕ್ಕುಬಂದಿ ತಪ್ಪು ಇರುತ್ತದೆ ಮತ್ತು ಸದರಿ ಜಮೀನನ್ನು ನಾನು ನೋಡಿಲ್ಲ ಎಂದರೆ ಸಾಕ್ಷಿಯು ನಾನು ಸಣ್ಣವಳಿದ್ದಾಗ ನೋಡಿದ್ದೆ ಈಗ ನೋಡಿಲ್ಲ ಎಂದು ನುಡಿಯುತ್ತಾರೆ. ಜಮೀನಿನ ಉತಾರ ರುದ್ರಯ್ಯರವರ ಹೆಸರಿನಲ್ಲಿರುತ್ತದೆ. ಸದರಿ ಆಸ್ತಿ ರುದ್ರಯ್ಯನಿಗೆ ಸೇರಿದ ಸ್ವಂತ ಆಸ್ತಿ ಎಂದರೆ ಸರಿ.

2. ಬಸವರಾಜರವರಿಗೆ ನಾವು 4 ಜನ ಮಕ್ಕಳು. ನಾವು 4 ಜನ ಮಕ್ಕಳು ಆ ಜಮೀನಿಗೆ ಹೋಗಿ ಯಾವತ್ತಿಗೂ ಸಹ ಬಿತ್ತಿ ಬೆಳೆಯುವುದನ್ನು ಮಾಡಿಲ್ಲ ಎಂದರೆ ಸರಿ. ನನ್ನ ಅರ್ಜಿ ಮತ್ತು ಮುಖ್ಯ ವಿಚಾರಣೆಯಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿದೆ. ಈ ಪ್ರಕರಣದಲ್ಲಿಯ ನನ್ನ ತಂದೆ ಮತ್ತು ಇತರರು ಡಿಎಚ್ ಆರ ರವರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಲು ಒಪ್ಪಿ ಕ್ರಯದ ಒಪ್ಪಂದದ ಕರಾರು ಪತ್ರವನ್ನು ಬರೆದುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ರುದ್ರಯ್ಯರವರು ತೀರಿಕೊಂಡ ನಂತರ ಅವರ ಮಕ್ಕಳು ಸದರಿ ಆಸ್ತಿಗೆ ಸಾಮೂಹಿಕವಾಗಿ ಮಾಲೀಕರಾಗಿದ್ದರು ಎಂದರೆ ಸರಿ. ಸದರಿ ಆಸ್ತಿಯು ರುದ್ರ ಯ್ಯರವರ ಸ್ವಂತ ಆಸ್ತಿಯಾಗಿದ್ದರಿಂದ ನನಗಾಗಲಿ ಮತ್ತು ನಮ್ಮ ಸಹೋದರರಿಗೆ ಆಗಲಿ ಸದರಿ ಆಸ್ತಿ ಪಿತ್ರಾರ್ಜಿತ ಆಸ್ತಿಯಾಗುವುದಿಲ್ಲ ಎಂದರೆ ಸರಿಯಲ್ಲ.

3. ಇದೇ ನ್ಯಾಯಾಲಯದಲ್ಲಿ ನನ್ನ ತಂದೆ ಮತ್ತು ಅವರ ಕುಟುಂಬದ ಸದಸ್ಯರು ಖರೀದಿ ವಚನ ಪತ್ರವನ್ನು ಬರೆದುಕೊಟ್ಟಿದ್ದರಿಂದ ಅದನ್ನು ಆಧರಿಸಿ ಶಂಕ್ರಪ್ಪರವರು ನನ್ನ ತಂದೆ ಮತ್ತು ಇತರರ ಮೇಲೆ ಅಸಲು ದಾವಾ ನಂಬರ 39/2018 ನ್ನು ಸಲ್ಲಿಸಿದ್ದರು ಎಂದರೆ ಸರಿ. ಆ ದಾವೆಯಲ್ಲಿ ನಮ್ಮ ತಂದೆಯವರು ವಕೀಲರ ಮುಖಾಂತರ ಹಾಜರಾಗಿ ಕೇಸು ನಡೆಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಪ್ರತಿವಾದಿ ನಂಬರ 1 ರಿಂದ 6 ರವರು ಸೇರಿ ಶಂಕ್ರಪ್ಪರವರಿಗೆ ನೋಂದಾಯಿತ ಖರೀದಿ ಪತ್ರವನ್ನು ಬರೆದುಕೊಡಬೇಕೆಂದು ಆದೇಶವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶವನ್ನು ನಮ್ಮ ತಂದೆಯವರಾಗಲಿ ಮತ್ತು ಉಳಿದವರಾಗಲಿ ಎಲ್ಲಿಯೂ ಸಹ ಪ್ರಶ್ನೆ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

4. ನನ್ನ ತಂಗಿ ಶಿವಮ್ಮ ರುದ್ರೇಶ ಹಿರೇಮಠರವರು ಅಸಲು ದಾವಾ ನಂಬರ 39/2018 ನ್ನು ಪ್ರಶ್ನಿಸಿ ಆರ್ ಎ ನಂಬರ 8/2024 ನ್ನು ಅಫೀಲು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿ ದಿಃ 28-11-2025 ರಂದು ವಜಾ ಆಗಿ ಅಸಲು ದಾವಾ

ನಂಬರ 39/2018 ರಲ್ಲಿ ಆದ ತೀರ್ಪನ್ನು ಸ್ವೀಕರಿಸಿ ಅಪೀಲು ವಜಾಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಆದ ಆದೇಶದ ಪ್ರಕಾರ ನನ್ನ ತಂದೆ ಮತ್ತು ಇತರರು ಶಂಕ್ರಪ್ಪರವರಿಗೆ ಖರೀದಿ ಪತ್ರವನ್ನು ಬರೆದುಕೊಡಬೇಕಾಗಿರುತ್ತದೆ ಎಂದರೆ ಸಾಕ್ಷಿಯು ಆಗುವುದಿಲ್ಲ ಎಂದು ನುಡಿಯುತ್ತಾರೆ.

5. ನಾನು ನನ್ನ ಅಣ್ಣ-ತಮ್ಮಂದಿರು, ನನ್ನ ತಂದೆ ಎಲ್ಲರೂ ಅನೋನ್ಯವಾಗಿರುತ್ತೇವೆ ಎಂದರೆ ಸರಿ. ಶಂಕ್ರಪ್ಪರವರಿಗೆ ಈ ರೀತಿ ಕ್ರಯ ಪತ್ರಬರೆದುಕೊಡಬೇಕೆಂದು ಆದೇಶವಾಗಿರುವ ವಿಚಾರವನ್ನು ತಿಳಿಸಿದರು ಎಂದರೆ ಸಾಕ್ಷಿಯು ನಾನೇ ತವರು ಮನೆಗೆ ಆಸ್ತಿ ಕೇಳಲು ಹೋದಾಗ ಗೊತ್ತಾಯಿತು ಎಂದು ನುಡಿಯುತ್ತಾರೆ. ಸದರಿ ವಿಷಯ ಈಗ ಒಂದು ವರ್ಷದ ಹಿಂದೆ ಗೊತ್ತಾಯಿತು. ನಾನು ಆ ಸಂಗತಿಯನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಷಯ ಈ ಮೊದಲೇ ಗೊತ್ತಿತ್ತು, ಈಗ ನನ್ನ ತಂದೆ ಹಾಗೂ ನನ್ನ ಸಹೋದರರೊಂದಿಗೆ ಸೇರಿಕೊಂಡು ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಪಿತ್ರಾರ್ಜಿತ ಆಸ್ತಿಯಾಗದೇ ಇರುವುದರಿಂದ ಮತ್ತು ನಮ್ಮ ತಂದೆ ಹಾಗೂ ಇತರರು ಈಗಾಗಲೇ ಮಾರಾಟ ಮಾಡಿರುವುದರಿಂದ ಸದರಿ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯು ನಮ್ಮ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಸದರಿ ಆಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲದೇ ಇರುವುದರಿಂದ ಈ ಅರ್ಜಿಯಲ್ಲಿ ತಕರಾರು ಮಾಡಲು ಹಕ್ಕಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರಿಕೆ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತಲೇಖನದಂತೆ, ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಅದೆ.

-ಸಹಿ-
ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ.